ಸೆಲ್ ಫೋನ್ ರಿಂಗಾದಾಗ ಕಾಫಿ ಕುಡಿಯುತ್ತಿದ್ದ ಸೂರ್ಯ ನಂಬರ್ ಕಡೆ ಕಣ್ಣುಹಾಯಿಸಿದ ಸುಮೇರು ಕಾಲ್ ಮಾಡುತ್ತಿದ್ದ. ಸೂರ್ಯ ಕಾಲ್ ರಿಸೀವ್ ಮಾಡಿ, "ಹಾಯ್ ಸುಮೇರು ಹೇಗಿದ್ದೀಯೋ?" ಎಂದು ಕೇಳಿದ.

"ಸಾರಿ ಸೂರ್ಯ. ನಾನು ಬಾಲು, ಸುಮೇರು ಕಸಿನ್."

"ಏನು ವಿಷಯ? ಸುಮೇರು ಎಲ್ಲಿ? ನೀನ್ಯಾಕೆ ಅವನ ಫೋನ್‌ನಿಂದ ಕಾಲ್ ಮಾಡ್ತಿದ್ದೀಯಾ?"

"ಸುಮೇರುಗೆ ಹುಷಾರಿಲ್ಲ. ಅವನು ನಿನ್ನನ್ನು ನೋಡಬೇಕೂಂತ ಹಂಬಲಿಸ್ತಿದ್ದಾನೆ. ನೀನು ಎಷ್ಟು ಬೇಗ ಬರ್ತೀಯೋ ಅಷ್ಟು ಒಳ್ಳೆಯದು."

"ಸುಮೇರುಗೆ ಏನಾಗಿದೆ?"

"ಬ್ಲಡ್ ಕ್ಯಾನ್ಸರ್ ಥರ್ಡ್‌ಸ್ಟೇಜ್, ಬದುಕಿದರೆ ಒಂದು ತಿಂಗಳಿರಬಹುದು ಅಷ್ಟೆ..."

"ನೋ ಬಾಲು, ಸಾಧ್ಯವೇ ಇಲ್ಲ."

"ಸತ್ಯ ಯಾವಾಗಲೂ ಕಹಿ ಸೂರ್ಯ. ಆಸ್ಪತ್ರೆಗೆ ಸೇರಿಸಿದ್ದೆವು. ಡಾಕ್ಟರ್ ಪ್ರಯೋಜನವಿಲ್ಲಾಂತ ಹೇಳಿದರು. ಸದ್ಯಕ್ಕೆ ಮನೆಯಲ್ಲೇ ಇದ್ದಾನೆ."

ಸೂರ್ಯನಿಗೆ ತನ್ನ ಜೀವದ ಗೆಳೆಯನ ಸ್ಥಿತಿ ಕೇಳಿ ತುಂಬಾ ಸಂಕಟವಾಯಿತು. ಅವನು ಮತ್ತು ಸುಮೇರು ಒಂದನೇ ತರಗತಿಯಿಂದ ಬಿ.ಇ. ವರೆಗೂ ಒಟ್ಟಿಗೆ ಓದಿದ್ದರು. ಸುಮೇರು ತಂದೆ ನಾಗಭೂಷಣ್ ಕಂಟ್ರಾಕ್ಟರ್. ಸುಮೇರು ಚಿನ್ನದ ಚಮಚ ಬಾಯಲ್ಲಿಟ್ಟುಕೊಂಡು ಹುಟ್ಟಿದ್ದ. ಅವನ ತಾಯಿ ದಮಯಂತಿ ತುಂಬಾ ಒಳ್ಳೆಯವರು.

ಸೂರ್ಯನ ತಂದೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಡ್ರೈವರ್ ಆಗಿದ್ದರು. ಅವನಿಗೆ ಒಬ್ಬ ಅಕ್ಕ. ಇಬ್ಬರು ತಂಗಿಯರಿದ್ದರು. ಅವನ ತಂದೆ ಕೆಲಸದಲ್ಲಿರುವಾಗಲೇ ದೊಡ್ಡಮಗಳ ಮದುವೆ ಮಾಡಿ ಮುಗಿಸಿದ್ದರು. ಮಗನ ಬಿ.ಇ. ಮುಗಿಯುತ್ತಿದ್ದಂತೆ ಅವರು ಬೆಂಗಳೂರಿಗೆ ಶಿಫ್ಟ್ ಆಗಿದ್ದರು. ಸೂರ್ಯ ಕ್ಯಾಂಪಸ್ ಇಂಟವ್ರ್ಯೂನಲ್ಲಿ ಸೆಲೆಕ್ಟ್ ಆಗಿದ್ದ. ಒಳ್ಳೆಯ ಕಂಪನಿಯಲ್ಲಿ ಕೆಲಸ ಸಿಕ್ಕಿತ್ತು. ತಂಗಿಯರ ಮದುವೆಯ ಜವಾಬ್ದಾರಿ ಅವನ ಮೇಲಿದ್ದುದರಿಂದ, ಅವನು ಕೆಲಸಕ್ಕೆ ಸೇರುವುದು ಅನಿವಾರ್ಯವಾಗಿತ್ತು.

ಸುಮೇರುಗೆ ಮೊದಲಿಂದಲೂ ಉಪನ್ಯಾಸಕನಾಗುವ ಹಂಬಲವಿತ್ತು.